**ರಾಜ್ಯದ ಪ್ರತಿ ಗ್ರಾಮದಲ್ಲಿ ಪಡಿತರ ವ್ಯವಸ್ಥೆ**

176 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರತಿ ಗ್ರಾಮದಲ್ಲಿ ಪಡಿತರ ವ್ಯವಸ್ಥೆ ಕೊಡಬೇಕೆನ್ನುವ ಉದ್ದೇಶವಿದ್ದರೂ ಪಡಿತರ ವ್ಯವಸ್ಥೆ ಗ್ರಾಮದಲ್ಲಿ ಕೊಡದಿರುವ ಕಾರಣವೇನು?*

ಆ) *ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕಟ್ಟುನಿಟ್ಟಿನ ಕ್ರಮವೇನು?*

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಈಗಾಗಲೇ ಸಾರ್ವಜನಿಕ ವಿತರಣೆ ಪದ್ಧತಿಯು ಎಲ್ಲಾ ಗ್ರಾಮಗಳಲ್ಲೂ ಜಾರಿಯಲ್ಲಿದ್ದು, ರಾಜ್ಯಾದ್ಯಂತ ಇರುವ 98 ಲಕ್ಷ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣೆ ಪದ್ಧತಿಯಡಿಯಲ್ಲಿಯೇ ಆಹಾರಧಾನ್ಯ ಹಾಗೂ ಇತರೆ ಅವಶ್ಯಕ ವಸ್ತುಗಳನ್ನು ವಿತರಿಸಲಾಗುತ್ತಿದೆ ಯಾದ್ದರಿಂದ ಯಾವುದೇ ಗ್ರಾಮವನ್ನು ಸಾರ್ವಜನಿಕ ವಿತರಣೆ ಪದ್ಧತಿಯಡಿಯಲ್ಲಿ ಸೇರಿಸಿಲ್ಲದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

**ವಿದ್ಯುತ್ ಉತ್ಪಾದನೆಗೆ ವಿದೇಶಿ ಕಂಪನಿಗಳಿಗೆ ಅನುಮತಿ**

177 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಯಾವ ಯಾವ ವಿದೇಶಿ ಕಂಪನಿಗಳು ಅನುಮತಿ ಕೇಳಿರುತ್ತವೆ? ಯಾವ ಯಾವ ಕಂಪನಿಗಳಿಗೆ ಅನುಮತಿ ನೀಡಲಾಗಿದೆ*

ಆ) *ಸರಕಾರ ಅನುಮತಿ ನೀಡಲಾದ ಸಂಸ್ಥೆಗಳು ಎಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾರ್ಮರ್ಥ್ಯವನ್ನು ಹೊಂದಿರುತ್ತದೆ ಮತ್ತು ಎಂದು ವಿದ್ಯುತ್ ಉತ್ಪಾದನೆ ಪ್ರಾರಂಭಿಸುತ್ತದೆ( ಎಂದು ವಿದ್ಯುತ್ ಉತ್ಪಾದನೆ ಪ್ರಾರಂಭಿಸಲು ಕರಾರನ್ನು ಒಪ್ಪಿಕೊಂಡಿವೆ)*

ಇ) *ಈ ಕಂಪನಿಗಳು ವಿದ್ಯುತನ್ನು ಸರಕಾರಕ್ಕೆ ಯಾವ ದರದಲ್ಲಿ ಕೊಡುತ್ತದೆ ಮತ್ತು ಖಾಸಗಿಯವರಿಗೆ ಯಾವ ದರದಲ್ಲಿ ಕೊಡುತ್ತದೆ*

ಶ್ರೀ ಜೆ.ಹೆಚ್. ಪಟೇಲ್(ಉಪ ಮುಖ್ಯಮಂತ್ರಿಗಳು) :

ಅ) ಅನುಬಂಧದಲ್ಲಿರುವಂತೆ

ಆ) 1) ಕೊಜೆಂಟ್ರಿಕ್ಸ್ ವಿದ್ಯುಚ್ಛಕ್ತಿ ಕಂಪನಿ, ಯು.ಎಸ್.ಎ.(ಮಂಗಳೂರು ವಿದ್ಯುತ್ ಕಂಪನಿ) ಮಂಗಳೂರಿನ ನಂದಿಕೂರಿನಲ್ಲಿ.

2) ಹೆಚ್.ಓ.ಕೆ. ಇಂಟರ್ ನ್ಯಾಷನಲ್ ಲಿ. ಯು.ಎಸ್.ಎ.ಹೊಸಪೇಟೆ(ಡೆಕ್ಕನ್ ಪವರ್ ಕಂಪನಿ).

3) ದಿ ಏಷಿಯಾ ಪವರ್ ಕಂಪನಿ, ಯು.ಎಸ್.ಎ. (ಚಾಮುಂಡಿ ಪವರ್ ಕಾರ್ಪೊರೇಷನ್) ಬಿಜಾಪುರ ಜಿಲ್ಲೆಯ ಅಲಮಟ್ಟಿಯಲ್ಲಿ ನಾರಾಯಣಪುರ ಮತ್ತು ತಮನಕಲ್.

4) ದಿ ಜಿಂದಾಲ್ ಟ್ರ್ಯಾಕ್ಟಬಲ್ ಪವರ್ ಕಾರ್ಪೋರೇಷನ್ ಲಿ. ಬೆಲ್ಲಿಯಂ (ಬಳ್ಳಾರಿ ಜಿಲ್ಲೆಯ ತರಂಗಲ್ಲುವಿನಲ್ಲಿ).

5) ಐ.ಪಿ.ಎಸ್., ಯು.ಎಸ್.ಎ.-ಬೆಂಗಳೂರು ಗ್ರಾಮೀಣ ಜಿಲ್ಲೆಯ ದೇವನಗುಂಟಿಯಲ್ಲಿ

6) ನಾರ್ತ ಈಸ್ಟಎನರ್ಜಿ ಸರ್ವಿಸಸ್ ಲಿ., ಹಾರಂಗಿ, ನುಗು.

ಇ) ಸುಮಾರು ಒಟ್ಟು 2782 ಮೆಗಾವ್ಯಾಟ್‌ನಷ್ಟು ಕೇಂದ್ರಿಯ ವಿದ್ಯುತ್ ಪ್ರಾಧಿಕಾರದಿಂದ ಟೆಕ್ನೋ-ಎಕನಾಮಿಕ್ಷ ಕ್ಲಿಯರೆನ್ಸ ದೊರೆತ ನಂತರ ವಿದ್ಯುತ್ ಉತ್ಪಾದನೆಯಾಗುವ ದಿನಾಂಕ ಹಾಗೂ ವಿದ್ಯುತ್ ದರವು ತಿಳಿಯುತ್ತದೆ.

**ANNEXURE**

| | | | |
|---|---|---|---|
| 1) | YTL Corporation Bernad | - | Chamalapur,Hospet, Mangalore. |
| 2) | Grandas(Singapure) | - | Mangalore. |
| 3) | Indo Gulf Fertilisers& Chemicals Corporation. | - | Mangalore. |
| 4) | Chigago Power Inc. USA | - | Chamalapur & Mysore City |
| 5) | Hyundai Corporation, South Korea | - | Chamalapure or elsewhere |
| 6) | Kontek Abbabi, Malaysia | - | Chamalapur, Yelehanka |
| 7) | Coastal Power production, Texas,USA | - | Not indicated. |
| 8) | OKI Industry Ltd, Thailand | - | Mysore & Mangalore. |

| | | | |
|---|---|---|---|
| 9) | NRICC, Ne Jersy, USA | - | Mangalore. |
| 10) | Harza Eng,Co.,USA | - | Shivasamudram, Beathi |
| 11) | Voest Aphine Machinery Constraction Engg. Austria | - | Sonapadi |
| 12) | CEECRO-Chicago Engg.Co. USA | - | Bhatkal, Holenarasipura. |
| 13) | Miza International, Switzerland | - | Dakshina kannada |
| 14) | Heat Research Corpn.Tesaa.USA | - | North Karnataka |
| 15) | Asian Printers, Malaysia | - | Not specified. |
| 16) | Honston Industries Energy India Inc. | - | Karwar. |
| 17) | Riehimen Power Corpn. | - | Srinivasapura |
| 18) | Benham Holway Power Group Oklama Tulsa | - | Dandeli,Kalinadi, Bedthi, Sharavathi,Sanapaedi, Almatti,Nahedegi |
| 19) | Lewis Staley Associates Inc | - | Not indicated. |
| 20) | Syed Khalil Dubai | - | Hospet |
| 21) | Asia Power Gen.International U.S.A. | - | Bangalore. |
| 22) | India Power Partners, Consortium | - | Not specified. |
| 23) | John Brown/VMP Oil Co., Trafalga House. | - | Near Karwar |
| 24) | Public Power International USA | - | Raichur, Chamalapur. |
| 25) | Caithness, USA | - | Bedthi, Dandeli |
| 26) | Condotte, Italy | - | Shivasamudram. |